ದಿಃ 09-03-2016 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ಡಿಕ್ರಿದಾರರ ಪರ ವಕೀಲರಾದ ಶ್ರೀ ಬಿ.ಎಚ್. ಇವರಿಂದ ಪಾಟೀ ಸವಾಲುಃ

ಪ್ರಸ್ತುತ ಡಿಕ್ರಿದಾರಕಳು ಅಸಲು ದಾವಾ ನಂಃ 77/1995 ಇದನ್ನು ಯಾವಾಗ ಸಲ್ಲಿಸಿದ್ದಳು ಎಂಬುದು ಗೊತ್ತಿಲ್ಲ. ನಾನು ಈ ಅರ್ಜಿಯಲ್ಲಿ ನನ್ನ ತಕರಾರನ್ನು ಸಲ್ಲಿಸಿದ ನಂತರ ಡಿಕ್ರಿದಾರಕಳು ತನ್ನ ದಾವೆಯನ್ನು ಯಾವ ನ್ಯಾಯಾಲಯದಲ್ಲಿ ಸಲ್ಲಿಸಿದ್ದಳು ಎಂಬ ಸಂಗತಿಯನ್ನು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಅದೇ ಪ್ರಕಾರ ಸದರಿ ಸಂಗತಿಯನ್ನು ಕೇಳಿ ತಿಳಿದುಕೊಳ್ಳಲು ಇಲ್ಲಿಯವರೆಗೆ ನಾನು ಯಾವುದೇ ಪ್ರಯತ್ನ ಮಾಡಲಿಲ್ಲ.

2. ಪ್ರಸ್ತುತ ಡಿಕ್ರಿದಾರಕಳು ತನ್ನ ದಾವೆಯನ್ನು ದಿಃ 22.04.1995 ರಲ್ಲಿ ಹಾಕಿರುತ್ತಾಳೆ ಅಂದರೆ ಸರಿ. ಈ ಅರ್ಜಿಯಲ್ಲಿ ನಾನು ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ನನಗೆ ಗೊತ್ತು. ಅನಂತರಾಜ್ ಪಾಟೀಲ್ ಎಂಬ ವ್ಯಕ್ತಿ ಪ್ರಸ್ತುತ ಅರ್ಜಿದಾರಳಾದ ಹಾಲಮ್ಮ ಇವಳ ಮಾವನಾದ ಕನ್ನವರ ಬೀರಪ್ಪ ಈತನ ಕಡೆಯಿಂದ ಸ್ವತ್ತನ್ನು ದಿಃ 23.06.1995 ರಂದು ಕ್ರಯಕ್ಕೆ ತೆಗೆದುಕೊಂಡಿರುತ್ತಾನೆ ಅಂದರೆ ಸರಿ. ಈ ಕುರಿತು ನಾನು ಹಾಜರುಪಡಿಸಿದ ದಾಖಲೆಯನ್ನು ನೋಡುತ್ತಿದ್ದೇನೆ. ಅದನ್ನು ಸಾಕ್ಷಿದಾರರು ಗುರುತು ಇಡಿದಿರುವುದರಿಂದ ನಿಪಿ-37 ಎಂದು ಗುರುತಿಸಲಾಯಿತು. ಬೀರಪ್ಪ ಮಾರಾಟ ಮಾಡಿದ ಸ್ವತ್ತು ಆತನ ಅಣ್ಣ-ತಮ್ಮಂದಿರ ನಡುವೆ ಆದ ಹಿಸ್ಸೆಯಲ್ಲಿ ಆತನ ಪಾಲಿಗೆ ಬಂದಿತ್ತು ಅಂದರೆ ಸರಿ. ಈ ಕುರಿತು ನಿಪಿ-14 ದಾಖಲೆ ಹಾಜರುಪಡಿಸಲಾಗಿದೆ.

3. ನಿಪಿ-37 ರ ಪ್ರಕಾರ ಬೀರಪ್ಪ ಈತನೊಬ್ಬನೇ ಅನಂತರಾಜ್ ಪಾಟೀಲ್ ಈತನಿಗೆ ಸ್ವತ್ತನ್ನು ಮಾರಾಟ ಮಾಡಿರುತ್ತಾನೆ ಅಂದರೆ ಸರಿ. ಆ ದಾಖಲೆಗೆ ಆತನ ಮಕ್ಕಳು ಪಾರ್ಟಿದಾರರು ಇಲ್ಲ ಅಂದರೆ ಸರಿ. ಮೇಲ್ಕಂಡ ಬೀರಪ್ಪ ಈತನಿಗೆ ಎಷ್ಟು ಜನ ಮಕ್ಕಳು ಎಂಬುದು ಗೊತ್ತಿಲ್ಲ. ಆತನಿಗೆ ಒಟ್ಟು 10

ಜನ ಮಕ್ಕಳು ಎಂಬುದು ಗೊತ್ತಿಲ್ಲ. 10 ಜನರ ಪೈಕಿ ಮೂರು ಜನ ಗಂಡು ಮಕ್ಕಳು ಮತ್ತು ಉಳಿದ ಏಳು ಜನ ಹೆಣ್ಣು ಮಕ್ಕಳು ಎಂಬುದು ಗೊತ್ತಿಲ್ಲ. ಡಿಕ್ರಿದಾರಕಳು ಬೀರಪ್ಪ ಈತನ ಮಗನಾದ ಹನುಮಂತಪ್ಪ ಈತನ ಹೆಂಡತಿ ಇರುವುದರಿಂದ ಬೀರಪ್ಪ ಈನಿತಗೆ ಅನಂತರಾಜ್ ಪಾಟೀಲ್ ಈತನಿಗೆ ಸ್ವತ್ತನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ ಅಂದರೆ ಸುಳ್ಳು. ಪ್ರಸ್ತುತ ಅರ್ಜಿದಾರಳು ದಾವೆ ಸಲ್ಲಿಸಿದ ನಂತರ ಆತನ ಮಾವನಾದ ಕಣ್ಣನವರ ಬೀರಪ್ಪ ಮತ್ತು ಅನಂತರಾಜ್ ಪಾಟೀಲ್ ಇವರಿಬ್ಬರೂ ಮಿಲಾಪಿಯಾಗಿ ನಿಪಿ-37 ನ್ನು ಸೃಷ್ಟಿಸಿಕೊಂಡಿರುತ್ತಾರೆ ಅಂದರೆ ಸುಳ್ಳು. ಆದ್ದರಿಂದ ನಿಪಿ-37 ರನ್ವಯ ಅಂತರಾಜ್ ಪಾಟೀಲ್ ಈತನಿಗೆ ಅದರಲ್ಲಿ ಹೇಳಿರುವ ಸ್ವತ್ತಿಗೆ ಮಾಲ್ಕೀ ಹಕ್ಕು ಉದ್ಭವವಾಗಿಲ್ಲ ಅಂದರೆ ಸುಳ್ಳು. ಆದ್ದರಿಂದ ನಾನು ಅನಂತರಾಜ್ ಪಾಟೀಲ್ ಈತನ ಕಡೆಯಿಂದ ನಿಪಿ-13 ರ ಪ್ರಕಾರ ಕ್ರಯಕ್ಕೆ ತೆಗೆದುಕೊಂಡ ಸ್ವತ್ತಿಗೂ ನನ್ನದು ಹಕ್ಕು ಪ್ರಾಪ್ತಿಯಾಗುವುದಿಲ್ಲ ಅಂದರೆ ಸುಳ್ಳು. ನಿಪಿ-13 ಕ್ರಯಪತ್ರದಲ್ಲಿ ಹೇಳಿದ ಸ್ವತ್ತಿಗೆ ನಾನು ಮಾಲೀಕನು ಅಲ್ಲ ಮತ್ತು ಹಕ್ಕುದಾರಕನು ಅಲ್ಲ ಅಂದರೆ ಸುಳ್ಳು.

4. ನಿಪಿ-28 ಭಾವಚಿತ್ರದಲ್ಲಿ ಕಾಣುವ ಮನೆಯ ಬಲ ಭಾಗದಲ್ಲಿ ಪೌಂಡೇಶನ್ ಹಾಕಿದ ಜಾಗೆ ಇದೆ ಅಂದರೆ ಸರಿ. ಡಿಕ್ರಿಯ ಪ್ರಕಾರ ನಿಪಿ-28 ರಲ್ಲಿ ತೋರಿಸಿದ ಪೌಂಡೇಶನ್ ಹಾಕಿದ ಜಾಗೆ ಅರ್ಜಿದಾರಳಾದ ಹಾಲಮ್ಮ ಇವಳ ಪಾಲಿಗೆ ಬಂದಿದ್ದು ಮತ್ತು ಅದನ್ನು ಈಗಾಗಲೇ ಇ.ಪಿ. ಅರ್ಜಿಯ ಪ್ರಕಾರ ಅವಳ ಸ್ವಾಧೀನಾನುಭವಕ್ಕೆ ಕೊಡಲಾಗಿದೆ ಅಂದರೆ ಸುಳ್ಳು. ಸದರಿ ಸ್ವತ್ತನ್ನು ಅರ್ಜಿದಾರಳು ನ್ಯಾಯಾಲಯದ ಮುಖಾಂತರ ತನ್ನ ಸ್ವಾಧೀನಕ್ಕೆ ಪಡೆದು ಅದಕ್ಕೆ ಅವಳು ಮಾಲೀಕಳು ಮತ್ತು ಹಕ್ಕುದಾರಳು ಆಗಿರುತ್ತಾಳೆ ಅಂದರೆ ಸುಳ್ಳು. ಸದರಿ ಸ್ವತ್ತಿನಲ್ಲಿ ನನ್ನದು ಯಾವುದೇ ಹಕ್ಕು, ಹಿತ ಮತ್ತು ಸಂಬಂಧ ಇಲ್ಲ ಅಂದರೆ ಸುಳ್ಳು. ಈ ಎಲ್ಲಾ ಸಂಗತಿಗಳ ಬಗ್ಗೆ ನನಗೆ ಗೊತ್ತಿದ್ದರೂ ಸಹ ಈ ಅರ್ಜಿಯಲ್ಲಿ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)**

**ಓ ಹೇ ಕೇ ಸರಿ ಇದೆ,**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಹರಿಹರ.**